**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.7155/2022**

**ಸಿ.ಡಬ್ಲ್ಯೂ-10**

**ಪಿ.ಡಬ್ಲ್ಯೂ-07**

| | | |
|---|---|---|
| ಸಾಕ್ಷಿಯ ಹೆಸರು | : | ಬನಶಂಕರಿ ಪಾಟೀಲ |
| ತಂದೆ/ಗಂಡನ ಹೆಸರು | : | ರೇವಣಸಿದ್ದ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಮಹಿಳಾ ಪೊಲೀಸ್ ಪೇದೆ |
| ವಾಸಸ್ಥಳ | : | ಹೊರ್ತಿ ಪೊಲೀಸ್ ಠಾಣೆ |

**ದಿನಾಂಕ:04-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನಾನು 2020 ರಿಂದ ಇಲ್ಲಿಯವರೆಗೆ ಹೊರ್ತಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ 12 ರವರ ಆದೇಶದ ಮೇರೆಗೆ 1 ಮತ್ತು 2 ನೇ ಆರೋಪಿತರನ್ನು ಪತ್ತೆ ಮಾಡಿ ಹಿಡಿದುಕೊಂಡು ಬರುವಂತೆ ನನಗೆ ಮತ್ತು ಚಾಸಾ 9 ರವರಿಗೆ ಒಂದು ಮೆಮೋ ನೀಡಿರುತ್ತಾರೆ. ದಿಃ18.12.2021 ರಂದು 1 ನೇ ಆರೋಪಿಯು ಮನೆಯಲ್ಲಿ ಇರುತ್ತಾರೆ ಎಂದು ಬಾತ್ಮಿ ಬಂದಿದ್ದು ಹೋಗಿ ಸದರಿಯವರನ್ನು ಹಿಡಿದುಕೊಂಡು ಬಂದು ಚಾಸಾ 12 ರವರಿಗೆ ಒಪ್ಪಿಸಿ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಜ್ಞಾಪನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು, ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಬಿ.ಬಿ. ವಕೀಲರಿಂದಃ**

ನಾನು ಈ ಕುರಿತು ಹೇಳಿಕೆಯನ್ನು ನೀಡಿಲ್ಲ ಆದರೆ ವರದಿಯನ್ನು ನೀಡಿರುತ್ತೇನೆ. 1 ನೇ ಆರೋಪಿಯನ್ನು ಹಿಡಿದ ಜಾಗದ ಚಕಬಂದಿ ನನಗೆ ಗೊತ್ತಿಲ್ಲ. 1 ನೇ ಆರೋಪಿಯ

ಹೊಲಕ್ಕೆ ಚಾಸಾ 1 ರವರು ತಕರಾರು ಮಾಡಿದ್ದು ಕಾರಣ 1ನೇ ಆರೋಪಿಯು ಠಾಣೆಯಲ್ಲಿ ದೂರನ್ನು ನೀಡಲು ಬಂದಾಗ ಅವರನ್ನು ಅಲ್ಲಿ ದಸ್ತಗಿರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**